# 37ಸಾವಿರ ಜನರಿಗೆ ಒಂದು ದೇಶ!





ಲೀಚೆನ್‌ಸ್ಟೇನ್ ದೇಶದ ಸುತ್ತ ಆವರಿಸಿರುವ ಆಲ್ಪ್ಸ್ ಪರ್ವತಗಳು

**ಆಲ್ಪ್ಸ್ ಪರ್ವತ ಶ್ರೇಣಿಯ ಸೆರಗಿನಲ್ಲಿರುವ ಪುಟ್ಟ ರಾಷ್ಟ್ರ ಈ ಲೀಚೆನ್‌ಸ್ಟೇನ್. ಇದು ಎಷ್ಟು ಪುಟ್ಟ ರಾಷ್ಟ್ರವೆಂದರೆ ಈ ದೇಶಕ್ಕೆ ಸೈನ್ಯವೇ ಇಲ್ಲ!**

■ ಚಿತ್ರ–ಲೇಖನ: **ಡಿ.ಜಿ. ಮಲ್ಲಿಕಾರ್ಜುನ**

ಲೀಚೆನ್‌ಸ್ಟೇನ್ (**Liechtenstein**) ಎಂಬ ಉಚ್ಚರಿಸಲು ಕಷ್ಟವಾಗುವ ಹೆಸರಿರುವ ಪುಟ್ಟ ರಾಷ್ಟ್ರ ಯೂರೋಪ್‌ನಲ್ಲಿದೆ. ಆಸ್ಟ್ರಿಯಾ ಮತ್ತು ಸ್ವಿಝರ್ಲಂಡ್ ನಡುವೆ ಆಲ್ಪ್ಸ್ ಪರ್ವತ ಶ್ರೇಣಿಯ ಸೆರಗಿನಲ್ಲಿ ಇದು ಕಿನ್ನರ ಲೋಕದಂತೆ ಬೆಚ್ಚಗೆ ಅವಿತಿಟ್ಟುಕೊಂಡಿದೆ.

ಕ್ಯಾಸೆಲ್‌ಗಳ ಕಿರೀಟವಿಟ್ಟುಕೊಂಡ ಆಲ್ಪ್ಸ್ ಪರ್ವತಗಳ ಕಣಿವೆಯಲ್ಲಿ ಗಟ್ಟಿ ಮನಸ್ಥಿತಿಯ ರಾಜನ ಆಳ್ವಿಕೆಯಲ್ಲಿರುವ ಅತ್ಯಂತ ಶ್ರೀಮಂತ ರಾಷ್ಟ್ರವಿದು. 25 ಕಿ.ಮೀ ಉದ್ದ 12 ಕಿ.ಮೀ ಅಗಲವಿರುವ ಈ ದೇಶದಲ್ಲಿ ವಿಮಾನ ನಿಲ್ದಾಣವಿಲ್ಲ. ಸ್ವಿಝರ್ಲಂಡ್‌ನಿಂದ ಸ್ಥಳೀಯ ಸಾರಿಗೆ ಬಸ್ ಮೂಲಕ ಬರಬೇಕು.

